Leave of Absence to Sri K. Ratnakumar Shetty—Grant of

Mr. SPEAKER.—I have received a letter dated 11th March 1971 from Sri Ratnakumar Shetty, Member, Legislative Assembly, requesting for leave of absence from attending the current sittings of the Assembly due to ill-health.

Is it the pleasure of the Assembly that permission be granted to Sri Ratnakumar Shetty for remaining absent from the meetings of the current session of the Assembly ?

HON. MEMBERS.—Yes.

Mr. SPEAKER.—Leave to remain absent is granted to the Member.

Business of the House

ಶ್ರೀ ಕೆ. ಪ್ರಭಾಕರ್ (ವರ್ತೂರು).—ಸ್ವಾಮಿ, ನಾನು ಕೆಲವು ಪ್ರಶ್ನೆಗಳನ್ನು ಕಳಿಸಿದ್ದೆ. ಅದರ ಬಗ್ಗೆ.....

Mr. SPEAKER.—Hon. Member should not raise it on the floor of the House. He was a Minister and a very old parliamentarian. He is aware that such things cannot be dealt with in the open House.

Before I call upon hon. Members to speak, I repeat that I am receiving so many requests for giving opportunities to speak. It would be difficult to meet everybody's request. I therefore request the members to exercise self-restraint. Normally no member should take more than 10 minutes. I hope hon. Member will comply with my request. I call upon Sri Channe Gowda to speak.

Budget Estimates for 1971-72—Generel Discussion

† ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೆ, ಹಣಕಾಸಿನ ಸಚಿವರು ತೆರಿಗೆ ರಹಿತವಾದ ಮುಂಗಡಪತ್ರವನ್ನು ಸಭೆಯ ಮುಂದಿಟ್ಟು ನುಮಾರು 14 ಕೋಟಿ ರೂಪಾಯಿಯ ಖೋತಾ ಬಜೆಟನ್ನು ಇಲ್ಲಿ ತಂದಿದ್ದಾರೆ. ತೆರಿಗೆಗಳನ್ನು ಸಾಮಾನ್ಯವಾಗಿ ಹಾಕೆ ತುಂಬಿನುವವರು ಈ ಸಾರಿ ಏಕೆ ಆ ಕೆಲಸವನ್ನು ಮಾಡಬೇಕೆಂದು ಖೋತಾ ಬಜೆಟನ್ನು ನಮ್ಮ ಮುಂದಿಟ್ಟಿದ್ದಾರೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇತ್ತೀಚೆಗೆ ರಾಷ್ಟ್ರದಲ್ಲಿ ಮಹತ್ತರವಾದ ಬದಲಾವಣೆಗಳಾಗಿರುವುದರಿಂದ ನಾನು ಇದನ್ನು ಬಹಳ ಪ್ರಬಲವಾಗಿ ವಿರೋಧಿಸಬೇಕಾಗಿದೆ. ನಾನು ಮೊದಲಿನಿಂದಲೂ ವಿರೋಧ ಪಕ್ಷದಿಂದ ಆರಿಸಿ ಬಂದ ಸದಸ್ಯ. ಇವತ್ತು ಅಧಿಕಾರದಲ್ಲಿ (ಒ) ಸದಸ್ಯರು ಇರಬಹುದು, ಅಥವಾ ನಾಳೆ (ಆರ್) ಸದಸ್ಯರು ಬರಬಹುದು. ಆದರೆ, ವಿರೋಧ ಪಕ್ಷದಿಂದ ಬಂದಂತಹ ನಾನು ಈ ಮುಂಗಡ ಪತ್ರವನ್ನು ತೀವ್ರವಾಗಿ ವಿರೋಧಿಸುತ್ತಾ, ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕಾಂಗ್ರೆಸ್ (ಒ) ನವರು ನೆಲ, ಜಲದ ಪ್ರಶ್ನೆಯನ್ನು ಬೃಹದಾಕಾರವಾಗಿ ಜನರ ಮುಂದೆ ಪ್ರಸಾರ ಮಾಡಿದರು. ಆದರೆ ಇವರು ನೆಲ ಮತ್ತು ಜಲಕ್ಕಿಂತ ಮುಖ್ಯವಾದ ಜನರ ಪ್ರಶ್ನೆಯನ್ನು ಮರೆತ ಹಾಗಿದೆ. ಮೈಸೂರು ಜನರಿಗೆ ಕೇಂದ್ರಸರ್ಕಾರದವರು ಎಷ್ಟು ಅನ್ಯಾಯ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಹಣಕಾಸಿನ ಸಚಿವರು ಬಜೆಟನಲ್ಲಿ ಯಾವುದನ್ನೂ ಹೇಳಿಲ್ಲ. ಮೈಸೂರಿನವರಿಗೆ ಕೇಂದ್ರಸರ್ಕಾರದ ಸೇವೆಯಲ್ಲಿ ಯಾವ